ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಹಾಗೂ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

3) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) ಅವರ ಹೆಸರಿನ ಮುಂದಿರುವ ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರು ನೀಡಿರುವ ಕರ್ನಾಟಕ ಸರ್ಕಾರದ ದಿನಾಂಕ 31ನೇ ಮಾರ್ಚಿ, 1999ರ ಅಂತ್ಯದವರೆಗಿನ (ವಾಣಿಜ್ಯ) ಸಂಖ್ಯೆ 2 ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಭೆಯ ಮುಂದಿಡಲಾದ ಕಾಗದಪತ್ರಗಳ 2ನೇ ಪಟ್ಟಿ

ಶ್ರೀ ಮಲ್ಲಿಕಾರ್ಜು ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ,

I ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು) ಅವರ ಪರವಾಗಿ

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8(3)ನೇ ಪ್ರಕರಣದ ಮೇರೆಗೆ.

1. ಕರ್ನಾಟಕ ನಾಗರೀಕ ಸೇವೆಗಳು (ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಿಬ್ಬಂದಿಯನ್ನು ಕರ್ನಾಟಕ ಲೋಕೋಪಯೋಗಿ ಇಂಜಿನೀಯರಿಂಗ್ ಇಲಾಖೆ ಸೇವೆಯಲ್ಲಿ) ವಿಲೀನಗೊಳಿಸಿರುವ (ವಿಶೇಷ) ನಿಯಮಗಳನ್ನು ರಚಿಸುವ ಸಂಬಂಧದಲ್ಲಿ ದಿನಾಂಕ 9-2-2000ದಂದು ಹೊರಡಿಸಿದ ಡಿಪಿಎಆರ್ 10 ಎಸ್ಆರ್‌ಡಿ 98ನೇ ಸಂಖ್ಯೆ ಅಧಿಸೂಚನೆ;

2. ಕರ್ನಾಟಕ ಸರ್ಕಾರ ಸಚಿವಾಲಯ ಸೇವೆ (ನೇಮಕಾತಿ) ನಿಯಮ 1992ಕ್ಕೆ ತಿದ್ದುಪಡಿ ಸಂಬಂಧವಾಗಿ ದಿನಾಂಕ 28-9-99ರಂದು ಹೊರಡಿಸಿದ ಡಿಪಿಎಆರ್ 54 ಎಸ್ಆರ್‌ಡಿ 98ನೇ ಸಂಖ್ಯೆ ಅಧಿಸೂಚನೆ;

3. ಕರ್ನಾಟಕ ನಾಗರೀಕ ಸೇವೆಗಳು (ಕಾರ್ಯ ನಿರ್ವಹಣಾ ವರದಿಗಳು) ನಿಯಮ (2000)ಗಳನ್ನು ರಚಿಸುವ ಸಂಬಂಧದಲ್ಲಿ ದಿನಾಂಕ 29-2-2000ದಂದು ಹೊರಡಿಸಿದ ಡಿಪಿಎಆರ್ 06 ಎಸಿಟಿ 97ನೇ ಸಂಖ್ಯೆ ಅಧಿಸೂಚನೆ;